ಇ) ಉಳಿದ ಅರ್ಜಿಗಳನ್ನು ನಿರುಪಯುಕ್ತವೆಂದು ಪರಿಗಣಿಸಲಾಗುತ್ತದೆ.

ಈ) ಭಾರತ ಸರ್ಕಾರದ ನಿಯಮಾವಳಿಯಂತೆ ಕಳೆದ ವರ್ಷದ ಅರ್ಜಿಗಳನ್ನು ಮುಂಬರುವ ವರ್ಷಗಳಲ್ಲಿ ಪರಿಗಣಿಸಲಾಗುತ್ತಿಲ್ಲ. ಏಕೆಂದರೆ ಆಯಾ ವರ್ಷಗಳಲ್ಲಿ ಅರ್ಜಿಗಳನ್ನು ಹೊಸದಾಗಿ ಕರೆಯಲಾಗುತ್ತದೆ.

ಉ) ಕೇಂದ್ರ ಸರ್ಕಾರದಿಂದ ಹೆಚ್ಚಿನ ಭೌತಿಕ ಗುರಿಯನ್ನು ತೆಗೆದುಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿರುವ ರೋಗಗ್ರಸ್ಥ ಕೈಗಾರಿಕೆಗಳ ಸಂಖ್ಯೆ

1636 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ರೋಗಗ್ರಸ್ಥ ಕೈಗಾರಿಕೆಗಳೆಷ್ಟು?

ಆ) ಅವುಗಳಲ್ಲಿ ಎಷ್ಟು ಕೈಗಾರಿಕೆಗಳನ್ನು ಮುಚ್ಚಲ್ಪಟ್ಟಿವೆ?

ಇ) ಸರ್ಕಾರಕ್ಕೆ ಈ ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನಗೊಳಿಸಲು ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) 1. ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು - 38

2. ಸಣ್ಣ ಪ್ರಮಾಣದ ಕೈಗಾರಿಕೆಗಳು - 1621

ಆ) 1. ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು - 20

2. ಸಣ್ಣ ಪ್ರಮಾಣದ ಕೈಗಾರಿಕೆಗಳು - 708

ಇ) ರಾಜ್ಯ ಸರ್ಕಾರ ಬಿ.ಐ.ಎಫ್.ಆರ್.ಯಿಂದ ಅನುಮೋದಿತ ರೋಗಗ್ರಸ್ಥ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಈ ಕೆಳಗಿನ ಸಹಾಯ ಮತ್ತು ಸವಲತ್ತುಗಳನ್ನು ಪುನಶ್ಚೇತನಗೊಳಿಸಲು ಕೊಡಲಾಗುತ್ತಿದೆ.

1) ಅಭಿವೃದ್ಧಿ ಸಾಲದ ವಸೂಲಾತಿಯನ್ನು ಮೂರು ವರ್ಷ ಮುಂದೂಡಲಾಗುವುದು.

2) ಕೈಗಾರಿಕೆಗಳಿಗೆ ವಿಧಿಸುವ ವಿದ್ಯುಚ್ಛಕ್ತಿ ಕಡಿತದ ಪ್ರಮಾಣದಲ್ಲಿ 50 % ರಿಯಾಯಿತಿ ನೀಡಲಾಗುವುದು.

3) ಸರ್ಕಾರ ಮತ್ತು ಸರ್ಕಾರದ ಅಧಿಕೃತ ನಿಯಮಗಳಿಗೆ ಬರಬೇಕಾದ ಸಾಲದ ಬಗ್ಗೆ ಬ್ಯಾಂಕ್‌ಗಳಿಂದ ಜಾಮೀನು ಕೇಳದಿರುವುದು.

4) ರೋಗಗ್ರಸ್ಥ ಘಟಕಗಳ ಕೆಲಸಗಾರರೊಡನೆ ಹಾಗೂ ಕಾನೂನು ಇಲಾಖೆಯೊಡನೆ ನ್ಯಾಯವಾದ ರೀತಿಯಲ್ಲಿ ಒಪ್ಪಂದ ಮಾಡಿಕೊಳ್ಳಲು ಅನುವಾಗುವುದು.

5) ಮಾರಾಟ ತೆರಿಗೆ ವಸೂಲಾತಿ, ವಿದ್ಯುತ್ ತೆರಿಗೆ ವಸೂಲಾತಿ ಬಗ್ಗೆ ಮುಂದೂಡಿಕೆಯನ್ನು ಪ್ರತಿ ಘಟಕದ ಆರ್ಹತೆಯ ಮೇಲೆ ನಿರ್ಧರಿಸಲಾಗುವುದು.

ರಾಜ್ಯ ಸರ್ಕಾರವು ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1) ಸರ್ಕಾರಿ ಆದೇಶ ಸಂಖ್ಯೆ ಸಿಐ 138 ಎಸ್ ಪಿಸಿ 88(ಪಿ) ದಿನಾಂಕ 17-10-88ರ ಅನ್ವಯ ರಾಜ್ಯಮಟ್ಟದ ಪುನಶ್ಚೇತನ ಸಮಿತಿಯನ್ನು ರಚಿಸಲಾಗಿದ್ದು ಸದರಿ ಸಮಿತಿಯೂ ರೋಗಗ್ರಸ್ಥ ಕೈಗಾರಿಕೆಗಳಿಗೆ ರೂ.50,000-00 ಗಳಿಗೆ ಮೀರದಂತೆ ಬೀಜಧನ ಸಾಲವನ್ನು ಮಂಜೂರು ಮಾಡುತ್ತದೆ.

2) ಅಂತಹ ರಾಜ್ಯ ಹಣಕಾಸು ಸಂಸ್ಥೆಗಳ ಸಮಿತಿ (ಇಂಟರ್ ಇನ್ಸ್‌ಟ್ಯೂಷನಲ್ ಕಮಿಟಿಯನ್ನು) ವಾಣಿಜ್ಯ ಮತ್ತು ಕೈಗಾರಿಕ ಇಲಾಖೆಯ ಕಾರ್ಯದರ್ಶಿಯ

ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಈ ಸಮಿತಿಯು ರೋಗಗ್ರಸ್ಥ ಸಣ್ಣ ಪ್ರಮಾಣದ ಘಟಕಗಳ ತೊಂದರೆಗಳನ್ನು ಪರಿಶೀಲಿಸುತ್ತದೆ.

3) ಜಿಲ್ಲೆಯಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ತೊಂದರೆಯನ್ನು ಪರಿಶೀಲಿಸಲು ಜಿಲ್ಲಾವಾರು ರೋಗಗ್ರಸ್ಥ ಪುನಶ್ಚೇತನ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ :138 / ಎಸ್‌ಪಿಸಿ / 90 (ಪಿ) ದಿ.27-9-90 ರಲ್ಲಿ ಕೆಲವು ಸವಲತ್ತು ಮತ್ತು ರಿಯಾಯಿತಿಗಳನ್ನು ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನೀಡಲಾಗಿದೆ.

ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ವೃಂದಗಳಲ್ಲಿಯು ಮುಂಬಡ್ತಿ ನೀಡುವುದು

1391 - ಶ್ರೀ ಬಿ.ಹೆಚ್.ಲಕ್ಷ್ಮಣಯ್ಯ (ಬೇಲೂರು), ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಸರ್ಕಾರಿ ಆದೇಶ ಸಂಖ್ಯೆ ಃ: ಡಿಪಿಎಆರ್ 22 ಎಸ್‌ಬಿಸಿ 79 ರ ಅನ್ವಯ ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ವೃಂದಗಳಲ್ಲಿಯೂ ಮುಂಬಡ್ತಿ ನೀಡುವಾಗ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳವರಿಗೆ ಸಾಕಷ್ಟು ಮೀಸಲಾತಿಯನ್ನು ನೀಡಲಾಗಿದೆಯೇ (ಪ್ರಕರಣವಾರು ವಿವರಗಳನ್ನು ದಯವಿಟ್ಟು ಒದಗಿಸುವುದು),

ಬಿ) ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 126 ಎಸ್ ಸಿಆರ್ 82, ದಿನಾಂಕ 26-11-82ರ ಸೂಚನೆಗಳ ಪ್ರಕಾರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡದೇ ಸರ್ಕಾರಿ ಸಚಿವಾಲಯದಲ್ಲಿ 1983-84 ರಲ್ಲಿ 109 ಹಿರಿಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಿದ್ದರಿಂದ ಹೆಚ್ಚಿನ ಮೀಸಲು ಹುದ್ದೆಗಳನ್ನು ಇತರರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸಿ) ಸರ್ಕಾರದ ಮುಂದೆ ಈ ಬಗ್ಗೆ ಪ್ರಸ್ತಾಪಗಳೇನಾದರೂ ಇದೆಯೇ ಹಾಗಿದ್ದಲ್ಲಿ ಈ ಪ್ರಸ್ತಾಪದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಡಿ) ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಲಭ್ಯವಾಗದಿದ್ದ ಹುದ್ದೆಗಳನ್ನು ಪೂರ್ವಸ್ಥಿತಿಗೆ ತಂದು ಅವುಗಳನ್ನು ಪುನರ್ ಸ್ಥಾಪಿಸಲು ಎ.ಐ.ಆರ್. 1975 ಎಸ್.ಸಿ. 1116 ರಲ್ಲಿ ವರದಿಯಾಗಿರುವ ರಾಜ್‌ಕುಮಾರ್-ವಿ-ಭಾರತ ಗಣರಾಜ್ಯ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿರುವ ಕ್ರಮದಂತೆ ಹಾಗೂ ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದ ದಿನಾಂಕ 6-7-90 ಕ್ರಮಾಂಕ ಎಡಿಎಂ-1/ 236 ಆರ್ ಟಿ.ಸಿ.90 ಮತ್ತು ದಿನಾಂಕ 29-3-83ರ ಕ್ರಮಾಂಕ 3 ಎಸ್.ಎಸ್.ಆರ್. 81ರ ಅಧಿಸೂಚನೆಯಂತೆ ಸ್ಥಾಪಿತಗೊಂಡಿರುವ ಪೂರ್ವ ನಿದರ್ಶನಗಳ ಅನ್ವಯ ದಿನಾಂಕ 7-3-84ರ ಕ್ರಮಾಂಕ ಡಿಪಿಎಆರ್ 1ಎಸ್.ಸಿಆರ್. 83ರ ಅಧಿಸೂಚನೆಯ ತಿದ್ದುಪಡಿಯನ್ನು ಪೂರ್ವಾನ್ವಯಗೊಳಿಸಲು ಸರ್ಕಾರವು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳುವುದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಎ) ಹೌದು. ಸರ್ಕಾರಿ ಆದೇಶವು ಜಾರಿಗೆ ಬಂದ ನಂತರ ವಿವಿಧ ವೃಂದಗಳಿಗೆ ನೀಡಲಾಗಿರುವ ಮುಂಬಡ್ತಿಗಳ ವಿವರ ಕೆಳಕಂಡಂತಿದೆ.

		ಒಟ್ಟು	ಅದರಲ್ಲಿ	
	ವೃಂದ	ಮುಂಬಡ್ತಿ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1.	ಅಧೀನ ಕಾರ್ಯದರ್ಶಿ	139	26	2
2.	ಶಾಖಾಧಿಕಾರಿ	298	41	6
3.	ಹಿರಿಯ ಸಹಾಯಕರು	711	88	10
4.	ಸಹಾಯಕರು	480	76	16
5.	ಶೀಘ್ರ ಲಿಪಿಕಾರರು	69	8	2
6.	ಕಿರಿಯ ಸಹಾಯಕರು	133	20	—
7.	ಬೆರಳಚ್ಚುಗಾರರು	8	—	—

ಬಿ) 109 ಹಿರಿಯ ಸಹಾಯಕರ ಹುದ್ದೆಗಳನ್ನು 1983-84 ರಲ್ಲಿ ಆಗ ಜಾರಿಯಲ್ಲಿದ್ದ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ತುಂಬಲಾಗಿದೆ. ಅರ್ಹರಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಇಲ್ಲದಿದ್ದ ಪ್ರಯುಕ್ತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿದ್ದು ಕೆಲವು ಹುದ್ದೆಗಳನ್ನು ಬೇರೆಯವರಿಗೆ ನೀಡಲಾಯಿತು.

ಸಿ) ಈ ವಿಷಯವು ಪರಿಶೀಲನೆಯಲ್ಲಿದೆ.

ಡಿ) ಮೇಲೆ 'ಸಿ'ಗೆ ನೀಡಿರುವ ಉತ್ತರವನ್ನು ನೋಡಿ

ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಸಾಲು ಮರಗಳ ನಿರ್ವಹಣೆ

481 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಮುಖ್ಯ ಜಿಲ್ಲಾ ರಸ್ತೆ ಇತರ ಜಿಲ್ಲಾ ರಸ್ತೆ ಹಾಗೂ ಗ್ರಾಮೀಣ ರಸ್ತೆಗಳ ಪಕ್ಕದಲ್ಲಿರುವ ಸಾಲುಮರಗಳ ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ?

ಬಿ) ಕೆಲವು ಕಡೆ ರಸ್ತೆ ಬದಿಗಳ ಮರಗಳನ್ನು ಅಡೆ ತಡೆ ಇಲ್ಲದೆ ಕತ್ತರಿಸುವುದು ನಿಜವೆ?

ಸಿ) ಈ ರಸ್ತೆಗಳ ಬದಿಯಲ್ಲಿರುವ ಸಾಲು ಮರಗಳನ್ನು ಅವುಗಳ ಇನ್ನೂ ಒಳ್ಳೆರಕ್ಷಣೆಗಾಗಿ ಹತ್ತಿರದಲ್ಲಿರುವ ಮನೆ ಮಾಲೀಕರಿಗೆ ಒಪ್ಪಿಸಲು ಯಾವುದಾದರೂ ಪ್ರಸ್ತಾವನೆಯನ್ನು ಸರ್ಕಾರವು ಕೈಗೊಂಡಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಎ) ಚಿತ್ರದುರ್ಗ, ಕೋಲಾರ, ತುಮಕೂರು, ಉತ್ತರ ಕನ್ನಡ ಚಿಕ್ಕಮಗಳೂರು, ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆ ಬದಿಯಲ್ಲಿರುವ ಸಾಲುಮರಗಳನ್ನು ಸಂಬಂಧಪಟ್ಟ ಮುಖ್ಯ ಇಂಜಿನಿಯರ್‌ರವರು ನಿರ್ವಹಣೆ ಮಾಡುತ್ತಾರೆ. ಮಿಕ್ಕ ಜಿಲ್ಲೆಗಳಲ್ಲಿ ಬರುವ ರಸ್ತೆ ಸಾಲು ಮರಗಳನ್ನು ಅರಣ್ಯ ಇಲಾಖೆಯವರು ನಿರ್ವಹಣೆ ಮಾಡುತ್ತಾರೆ.

ಇತರ ಜಿಲ್ಲಾ ರಸ್ತೆಗಳ ಹಾಗೂ ಗ್ರಾಮೀಣ ರಸ್ತೆಗಳ ಬದಿಯಲ್ಲಿರುವ ಮರಗಳ ನಿರ್ವಹಣೆಯನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್ ನರವು ಮಾಡುತ್ತಾರೆ.

ಆ) ಅಂತಹ ಪ್ರಸಂಗ ಇರುವುದಿಲ್ಲ.

ಇ) ಇಲ್ಲ

ಬೆಂಗಳೂರು-ಕಡಪ ರಸ್ತೆಯ ಬಗ್ಗೆ.

472 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಹಾದುಹೋಗುವ ಬೆಂಗಳೂರು - ಕಡಪ ರಸ್ತೆಯ ವರ್ಗ ಯಾವುದು? ಹಾಗೂ ಅದರ ಉದ್ದವೆಷ್ಟು? ಈ ರಸ್ತೆಯ ಅಗಲವು ವರ್ಗೀಕರಣದ ಪ್ರಕಾರ ಇದೆಯೇ?

ಆ) ಈ ರಸ್ತೆಯ ಬೆಂಗಳೂರಿನಲ್ಲಿ ಬರುವ ಕೆಲವು ಭಾಗಗಳನ್ನು ಅಗಲಪಡಿಸುವುದು ನಿಜವೇ? ಕೋಲಾರ ವಿಭಾಗದಲ್ಲಿ ಬರುವ ರಸ್ತೆಯ ಭಾಗವನ್ನು ಅಗಲಪಡಿಸದಿರುವುದಕ್ಕೆ ಕಾರಣಗಳೇನು?

ಇ) ಈ ರಸ್ತೆಯನ್ನು ಅಗಲಪಡಿಸುವುದಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಯಾವುದಾದರೂ ಮನವಿಗಳು ಬಂದಿವೆಯೇ? ಬಂದಿದ್ದರೆ ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ?

ಈ) ಕೋಲಾರ ವಿಭಾಗದಲ್ಲಿ ಬರುವ ಈ ರಸ್ತೆಯ ಅಭಿವೃದ್ಧಿಗಾಗಿ 88-89, 89-90 ಮತ್ತು 90-91ರಲ್ಲಿ 5.00 ಲಕ್ಷ ರೂ.ಗಳ ಅನುದಾನವನ್ನು ಸೇರಿಸಿದ್ದು ನಿಜವೇ?

ಉ) ಈ ಭಾಗದ ರಸ್ತೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಅಂದಾಜನ್ನು ತಯಾರು ಮಾಡಿದ್ದರೂ ಕೂಡಾ ಇದುವರೆವಿಗೂ ಮಂಜೂರು ಮಾಡದಿರುವುದಕ್ಕೆ ಕಾರಣಗಳೇನು? ಈ ವರ್ಷ ಅಂದಾಜನ್ನು ಮಂಜೂರು ಮಾಡಲಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ಬೆಂಗಳೂರು - ಕಡಪ ರಸ್ತೆಯು ರಾಜ್ಯ ಹೆದ್ದಾರಿಯಾಗಿದೆ. ಕೋಲಾರ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಸ್ತೆಯ ಉದ್ದ 64.80 ಕಿ.ಮೀ.ಗಳು. ಇಂಡಿಯನ್ ರೋಡ್ ಕಾಂಗ್ರೆಸ್‌ನವರು ನಿಗಧಿಪಡಿಸಿರುವ ಪ್ರಮಾಣದಂತೆ ರಸ್ತೆಯ ಅಗಲವು ಸಿಂಗಲ್ ಲೇನ್ ಮಟ್ಟದಲ್ಲಿ ಇದೆ.

ಆ) 1) ಹೌದು

2) ಪ್ರತಿಯೊಂದು ಮತಕ್ಷೇತ್ರದಲ್ಲಿ ತೆಗೆದುಕೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅಡಿಯಲಕೋಲಾರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಈ ರಸ್ತೆಯ 56 ಕಿ.ಮೀ. ನಿಂದ 58ನೇ ಕಿ.ಮೀ.ವರೆಗೆ ಅಗಲಪಡಿಸುವುದು ಹಾಗೂ ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು 4.40 ಲಕ್ಷ ರೂ.ಗಳ ವೆಚ್ಚದ ಅಂದಾಜಿನಲ್ಲಿ ತೆಗೆದುಕೊಳ್ಳಲು ಗುತ್ತಿಗೆಯನ್ನು ಕರೆಯಲಾಗಿದೆ. ಹಾಗೂ 49.20ನೇ ಕಿ.ಮೀ. ನಿಂದ 52ನೇ ಕಿ.ಮೀ.ವರೆಗೆ 5.00ಲಕ್ಷ ರೂ.ಗಳ ಅಂದಾಜಿನಲ್ಲಿ ರಸ್ತೆಯನ್ನು ಅಗಲಪಡಿಸುವ ಮತ್ತು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಈ ಸಾಲಿನಲ್ಲಿ ತೆಗೆದುಕೊಳ್ಳಲಾಗುತ್ತಿದೆ.

ಇ) ಹೌದು. ಈ ಮೇಲೆ ತಿಳಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಈ) ಹೌದು

ಉ) ಈ ಕಾಮಗಾರಿಗೆ ಅಂದಾಜನ್ನು ಶೇಕಡಾ 30ಕ್ಕಿಂತ ಕಡಿಮೆ ಅನುದಾನ ಇದೆಯೆಂದು ಮಂಜೂರು ಮಾಡಲಾಗಿರಲಿಲ್ಲ. ಪ್ರಸಕ್ತ ಸಾಲಿನಲ್ಲಿ ಮರು ಹೊಂದಾಣಿಕೆಯಿಂದ ಅನುದಾನವನ್ನು ನಿಗದಿ ಪಡಿಸಿರುವುದರಿಂದ ಈ ಸಾಲಿನಲ್ಲಿ ಅಂದಾಜನ್ನು ಮಂಜೂರು ಮಾಡಲಾಗುವುದು.

ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ

1090 - ಶ್ರೀ ಮನೋಹರ ಏನಾಪುರ (ಬಳ್ಳೋಳಿ) : ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡುವ ಪ್ರೋತ್ಸಾಹವೇನು? ಏಕೆಂದರೆ ಬಿಜಾಪುರ ಜಿಲ್ಲೆಯು ಬಹಳ ಹಿಂದುಳಿದ ಜಿಲ್ಲೆಯಾಗಿರುತ್ತದೆ.

ಆ) ಏನಾದರೂ ನಿರ್ದಿಷ್ಟ ಕಾರ್ಯಕ್ರಮಗಳು ಬಿಜಾಪುರ ಜಿಲ್ಲೆಯಲ್ಲಿ ಆಳವಡಿಸಿರುತ್ತೀರಾ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು) :

ಅ) ಬಿಜಾಪುರ ಜಿಲ್ಲೆಗೆ ಯಾವ ತರವಾದ ವಿಶೇಷ ಪ್ರೋತ್ಸಾಹಗಳು ಇರುವುದಿಲ್ಲ. ಏಕೆಂದರೆ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳವರಿಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ಸಮನಾಗಿರುತ್ತದೆ. ಕೈಗಾರಿಕಾ ಇಲಾಖೆಯಲ್ಲಿ ಈ ಸೌಲಭ್ಯಗಳು ಇರುತ್ತವೆ. ಸ್ವಯಂ ಉದ್ಯೋಗ ಯೋಜನೆಯಲ್ಲಿ ಶೇ. 30 ರಷ್ಟು ಗುರಿ ಇರುತ್ತದೆ. ಅದು ಅಲ್ಲದೆ ವಿಶೇಷ ಘಟಕ ಯೋಜನೆಯಲ್ಲಿ 90-91ನೇ ಸಾಲಿಗೆ ಬಿಜಾಪುರ ಜಿಲ್ಲೆಗೆ 5 ಲಕ್ಷ ರೂ.ಗಳ ಅನುದಾನುವಿರುತ್ತದೆ.

ರಾಜ್ಯ ಸರ್ಕಾರದಿಂದ ಅಧಿಕ ಶೇ.5 ಬಂಡವಾಳ ಸಹಾಯ ಧನ, ಗರಿಷ್ಠ 1.00 ಲಕ್ಷ ಮೀರದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕೈಗಾರಿಕೋದ್ಯಮಿಗಳಿಗೆ ನೀಡಲಾಗುತ್ತದೆ.

ಆ) ಇಲ್ಲ

ಬೆಂಗಳೂರಿನಲ್ಲಿರುವ ಮೈಸೂರು ಕ್ರೊಂ ಟ್ಯಾನಿಂಗ್ ಕಂಪನಿ ನಿಯಮಿತ

1492 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಮೈಸೂರು ಕ್ರೊಂ ಟ್ಯಾನಿಂಗ್ ಕಂಪನಿ ನಿಯಮಿತದ ಕೆಲಸಗಾರರಿಗೆ ಸಂಬಳ, ಗ್ರಾಜುಯಟಿ ಹಾಗೂ ಇತರ ಸೌಲಭ್ಯಗಳನ್ನು ಆಡಳಿತ ವರ್ಗವು ಖಾಯಂ ಆಗಿ ನೀಡದಿರುವುದು ನಿಜವೆ?

ಆ) ಹಾಗಿದ್ದಲ್ಲಿ 1986-87ನೇ ಸಾಲಿನ ಬೋನಸ್‌ನ್ನು ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಖಾಯಂ ಆಗಿ ಸಂಬಳ ಮತ್ತು ಇತರ ಸೌಲಭ್ಯಗಳನ್ನು ಕೆಲಸಗಾರರಿಗೆ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು)

ಅ) ನಿಜವಲ್ಲ. ಸಂಬಳ ಗ್ರಾಚುಯಿಟಿ ಹಾಗೂ ಇತರ ಸೌಲಭ್ಯಗಳನ್ನು ಖಾಯಂ ಆಗಿ ನೀಡಲಾಗುತ್ತಿದೆ.

ಆ) ಕಂಪನಿಯು ನಷ್ಟದಲ್ಲಿ ನಡೆಯುತ್ತಿದೆ. ಆದ್ದರಿಂದ 8.33ರಷ್ಟು ಕನಿಷ್ಠ ಮಟ್ಟದ ಬೋನಸ್‌ನ್ನು 1986-87ನೇ ಸಾಲಿನಲ್ಲಿ ಅರ್ಹ ನೌಕರರಿಗೆ ನೀಡಲಾಗಿದೆ.

ಇ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.